
ನುಡಿ-ಚಿತ್ರ

# ರಾಜಕೀಯ ವ್ಯಂಗ್ಯಚಿತ್ರ ಹಾಗೆಂದರೇನು?






ಇಂಗ್ಲಿಷ್ ಮೂಲ: **ಬಿ.ವಿ. ರಾಮಮೂರ್ತಿ**

ಕನ್ನಡಕ್ಕೆ: **ಎಸ್. ದಿವಾಕರ್**


ಸಮಾಜಕ್ಕೆ ಆಕ್ಷೇಪಣೆಯ ಕನ್ನಡಿ ಹಿಡಿಯುವುದೇ ವ್ಯಂಗ್ಯಚಿತ್ರಕಾರನ ಕೆಲಸ. ಆದರೆ, ಅವನ ಸದಭಿರುಚಿಯ ಹಾಸ್ಯದಿಂದಾಗಿ ಆ ಕನ್ನಡಿಯ ಮೇಲ್ಮೈ ಸಪಾಟಾಗಿರುವುದಿಲ್ಲ. ವಾಸ್ತವವಾಗಿ ಅಂಥದೊಂದು ಕನ್ನಡಿಯನ್ನು ಪ್ರಾಣಿಸಂಗ್ರಹಾಲಯದ ಪ್ರವೇಶದ್ವಾರದಲ್ಲಿ ಕಾಣಬಹುದು. ಅದರಲ್ಲಿ ಪ್ರತಿಫಲನಗೊಂಡ ಚಿತ್ರ ನಮಗೂ ಪ್ರಾಣಿಗಳಿಗೂ ನಡುವೆ ಶಾರೀರಿಕವಾಗಿರುವ ಅತ್ಯಲ್ಪ ವ್ಯತ್ಯಾಸವನ್ನಷ್ಟೆ ಒಡೆದು ತೋರಿಸುತ್ತದೆ. ಜೊತೆಗೆ ಮೃಗಾಲಯಕ್ಕೆ ಹೋಗುವ ವೀಕ್ಷಕನಿಗೂ ಅಲ್ಲಿನ ಕೆಲವು ಪ್ರಾಣಿಗಳಿಗೂ ಎಂಥ ನಂಟಿದೆಯೆಂದು ಗ್ರಹಿಸಲೂ ಅದು ನೆರವಾಗುತ್ತದೆ. ಬಹುಶಃ ಇದೇ ಕಾರಣದಿಂದಲೇ ಕನ್ನಡಿ ಅಲ್ಲಿರಬೇಕು.

ವ್ಯಂಗ್ಯಚಿತ್ರಕಾರನಾದವನು ವ್ಯಂಗ್ಯಚಿತ್ರವೆನ್ನುವ ಇಂಥದೇ ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಳ್ಳಬೇಕೆಂದು ಸಮಾಜಕ್ಕೆ ಕರೆಕೊಡುತ್ತಾನೆ. ಹಾಗೆ ನೋಡಿದರೆ ವ್ಯಂಗ್ಯಚಿತ್ರ ಸಮಾಜದ್ದೇ ಆದ ಒಂದು ವಿಡಂಬನಾ ಚಿತ್ರ. ರಾಜಕೀಯ ವ್ಯಂಗ್ಯಚಿತ್ರದಲ್ಲಿ ಚಿತ್ರಣಗೊಂಡಿರುವವರು ಸಮಾಜದ ಪಾಡನ್ನು ನಿರ್ಧರಿಸುವ ಹೊಣೆಗಾರಿಕೆಯುಳ್ಳ ನಮ್ಮನಿಮ್ಮಂಥ ನಾಯಕರೇ. ಈ ನಾಯಕರು ತಮ್ಮ ಅನುಯಾಯಿಗಳೊಡನೆ ಹೆಜ್ಜೆಹಾಕುವಾಗ ಎಲ್ಲಿ ತಪ್ಪಿದರೆಂದು ವಿಡಂಬನೆಯ ಧಾಟಿಯಲ್ಲಿ ತೋರಿಸಿಕೊಡುವುದೇ ವ್ಯಂಗ್ಯಚಿತ್ರಕಾರನ ಕರ್ತವ್ಯ. ಅವನು ರಚಿಸಿದ ಸಣ್ಣಸಣ್ಣ ಚಿತ್ರಗಳು ಸಕಾರಣವಾಗಿಯೇ ಅನೇಕ ಸರ್ವಾಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಿವೆ. ದಪ್ಪಚರ್ಮದ ಸರ್ವಾಧಿಕಾರಿಗಳು ವಿಡಂಬನೆಯನ್ನು ಗೇಲಿಯೆಂದೋ ಪರಿಹಾಸ್ಯವೆಂದೋ ತಿಳಿಯುವ ತಪ್ಪು ಮಾಡುತ್ತಾರೆ. ಇತಿಹಾಸದಲ್ಲಿ ವ್ಯಂಗ್ಯಚಿತ್ರಗಳ ಪರಿಹಾಸ್ಯವನ್ನಷ್ಟೇ ಗ್ರಹಿಸಿಯೂ ಅದನ್ನು ಕಡೆಗಣಿಸಿದ